# 0303/0723

**III Semester 3 Year LL.B./VII Semester 5 Year B.A. LL.B./B.B.A.LL.B. Examination, December 2016**
**CRIMINAL LAW – II – CRIMINAL PROCEDURE CODE, J.J. ACT AND P.O. ACT**

Duration : 3 Hours | Max. Marks : 100

**Instructions** :
a. Answer Q. No. **9** and **any five** of the remaining questions.
b. Q. No. **9** carries **20** marks and the remaining questions carry **16** marks **each**.
c. Answer should be written in **English** or **Kannada** completely.

**ಸೂಚನೆಗಳು:**
a. ಪ್ರಶ್ನೆ ನಂ. **9** ಮತ್ತು ಉಳಿದವುಗಳಲ್ಲಿ ಯಾವುದೇ **ಐದು** ಪ್ರಶ್ನೆಗಳಿಗೆ ಉತ್ತರಿಸಿರಿ.
b. ಪ್ರಶ್ನೆ ನಂ. **9** ಕ್ಕೆ **20** ಅಂಕಗಳು ಉಳಿದವುಗಳಿಗೆ ತಲಾ **16** ಅಂಕಗಳು.
c. ಉತ್ತರಗಳನ್ನು ಸಂಪೂರ್ಣವಾಗಿ **ಆಂಗ್ಲ** ಅಥವಾ **ಕನ್ನಡ** ಭಾಷೆಯಲ್ಲಿ ಮಾತ್ರ ಉತ್ತರಿಸಬೇಕು.

Q. No. 1. Explain the procedure to be followed for the trial of warrant cases by magistrates. Marks : 16

ದಂಡಾಧಿಕಾರಿಗಳು ವಾರಂಟ್ ಪ್ರಕರಣಗಳನ್ನು ವಿಚಾರಣೆ ಮಾಡುವಾಗ ಪಾಲಿಸಬೇಕಾದ ಪ್ರಕ್ರಿಯೆಯನ್ನು ವಿವರಿಸಿರಿ.

Q. No. 2. Discuss the procedure to be followed by criminal courts in compelling the appearance of persons. Marks : 16

ಅಪರಾಧಿಕ ನ್ಯಾಯಾಲಯಗಳಲ್ಲಿ ವ್ಯಕ್ತಿಯ ಹಾಜರಾತಿಯನ್ನು ಒತ್ತಾಯಿಸಲು ಅನುಸರಿಸಬೇಕಾದ ಪ್ರಕ್ರಿಯೆಗಳನ್ನು ವಿವರಿಸಿರಿ.

Q. No. 3. "Separate charge is the rule and joinder of charge is the exception". Comment. Marks : 16

''ಆರೋಪವನ್ನು ಪ್ರತ್ಯೇಕವಾಗಿ ಮಾಡುವುದು ನಿಯಮ ಮತ್ತು ಜಂಟಿ ಆರೋಪ ಒಂದು ಅಪವಾದ''. ಟೀಕಿಸಿ.

P.T.O.

Q. No. 4. What is first information report ? Explain the procedure for recording first information report with its evidentiary value.

Marks : 16

ಪ್ರಥಮ ಮಾಹಿತಿ ವರದಿ ಎಂದರೇನು ? ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿಕೊಳ್ಳುವ ಪ್ರಕ್ರಿಯೆಯ ಜೊತೆಗೆ ಅದರ ಸಾಕ್ಷ್ಯ ಮೌಲ್ಯವನ್ನು ವಿವರಿಸಿರಿ.

Q. No. 5. Explain the provisions of Cr.P.C. relating to reference and revision.

Marks : 16

ಅಪರಾಧಿಕಾ ಪ್ರಕ್ರಿಯೆ ಸಂಹಿತೆಯಲ್ಲಿನ ಉಲ್ಲೇಖ ಮತ್ತು ಪರಿಷ್ಕರಣೆಗೆ ಸಂಬಂಧಿಸಿದ ಉಪಬಂಧಗಳನ್ನು ವಿವರಿಸಿರಿ.

Q. No. 6. What is complaint ? Explain the procedure to be followed by magistrate on receiving complaint.

Marks : 16

ಫಿರ್ಯಾಧಿ ಎಂದರೇನು ? ದಂಡಾಧಿಕಾರಿಯು ಫಿರ್ಯಾಧಿಯನ್ನು ಸ್ವೀಕರಿಸಿದ ನಂತರ ಅನುಸರಿಸಬೇಕಾದ ಪ್ರಕ್ರಿಯೆಯನ್ನು ವಿವರಿಸಿರಿ.

Q. No. 7. Discuss the provisions of Juvenile Justice (care and protection of children) Act, 2000 in respect of the establishment and maintenance of observation home and special home.

Marks : 16

ಅವಲೋಕನ ಗೃಹಗಳ ಮತ್ತು ವಿಶೇಷ ಗೃಹಗಳ ಸ್ಥಾಪನೆ ಮತ್ತು ಪೋಷಣೆಗೆ ಕುರಿತು ಇರುವ ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ಅಧಿನಿಯಮ 2000ದ ಉಪಬಂಧಗಳನ್ನು ಚರ್ಚಿಸಿರಿ.

Q. No. 8. Write short notes on **any two** of the following :

Marks : 2×8=16

a) Compoundable offences

b) Anticipatory bail

c) Admonition.

ಈ ಕೆಳಗಿನ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

a) ರಾಜಿಗೊಳಿಸಬಹುದಾದ ಅಪರಾಧಗಳು

b) ನಿರೀಕ್ಷಣಾ ಜಾಮೀನು

c) ವಾಗ್ದಂಡನೆ.

Q. No. 9. Solve **any two** of the following problems : Marks : 2×10=20

ಈ ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ಬಿಡಿಸಿರಿ :

a) Satish and Shankar, accused in a non-bailable offence, are in judicial custody for more than 3 months and the police have not filed charge sheet against them. Now they want to seek bail as of right. Will they succeed ?

ಜಾಮೀನು ಇಲ್ಲದ ಅಪರಾಧಗಳ ಅಪಾದಿತರಾದ ಸತೀಶ ಮತ್ತು ಶಂಕರ ಕಳೆದ ಮೂರು ತಿಂಗಳಿಗೆ ಮೇಲ್ಪಟ್ಟು ನ್ಯಾಯಾಂಗಿಕ ಅಭಿರಕ್ಷೆಯಲ್ಲಿದ್ದಾರೆ. ಪೋಲಿಸರು ಅವರ ವಿರುದ್ಧ ಇನ್ನೂ ದೋಷಾರೋಪಣೆಯನ್ನು ಸಲ್ಲಿಸಿಲ್ಲ. ಈಗ ಅವರು ಹಕ್ಕು ಬದ್ಧವಾಗಿ ಜಾಮೀನು ಪಡೆದುಕೊಳ್ಳಲು ಇಚ್ಛಿಸಿದ್ದಾರೆ. ಅವರು ಯಶಸ್ವಿಯಾಗುವರೇ ?

b) 'A' is tried for causing grievous hurt to 'B' and convicted. 'B' afterwards dies. Decide the consequence of the death of 'B' under Cr.P.C.

'ಬ' ಗೆ ತೀವ್ರವಾದ ಗಾಯವನ್ನು ಮಾಡಿದ್ದಕ್ಕಾಗಿ 'ಅ'ನನ್ನು ನ್ಯಾಯಾಲಯವು ಅಧಿವಿಚಾರಣೆಗೆ ಒಳಪಡಿಸಿ ಶಿಕ್ಷಿಸುತ್ತದೆ. ತದನಂತರ 'ಬ'ನು ಮರಣವನ್ನು ಹೊಂದುತ್ತಾನೆ. 'ಬ'ನ ಮರಣದ ಪರಿಣಾಮವನ್ನು ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಕಾರಣ ಸಹಿತ ತಿಳಿಸಿರಿ.

c) A court takes cognizance of an offence of Murder three years after the date of alleged murder. Accused pleads that this is barred by limitation. Decide.

ಒಂದು ಕೊಲೆ ಮಾಡಲಾಯಿತೆನ್ನುವ ದಿನಾಂಕದಿಂದ ಮೂರು ವರ್ಷಗಳ ನಂತರ ನ್ಯಾಯಾಲಯವೊಂದು ಅದರ ಸಂಜ್ಞೆ ತೆಗೆದುಕೊಂಡಿದೆ. ಕಾಲಮಿತಿ ಮುಗಿದು ಹೋಗಿರುವುದರಿಂದ ಈ ಅಪರಾಧದ ಸಂಜ್ಞೆ ತೆಗೆದುಕೊಳ್ಳುವಂತಿಲ್ಲ ಎಂದು ಆರೋಪಿತನು ಮನವಿ ಮಾಡಿದ್ದಾನೆ. ನಿರ್ಧರಿಸಿ.